**ಓ.ಎಸ್. ನಂಬರಃ 64/2019**

**ಡಿ. ಡಬ್ಲ್ಯೂಃ 1**

**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 24-04-2025)**

**ಪಾಟೀ ಸವಾಲು : 20 ರಿಂದ 22 ನೇ ಪ್ರತಿವಾದಿಗಳ ಪರ ಶ್ರೀ ಜಿ ಎಂ ಡಿ ವಕೀಲರಿಂದ.**

ವಾದಿ ನನ್ನ ಗಂಡನ ಸಹೋದರ ಎಂದರೆ ಸರಿ. ನನ್ನ ಗಂಡನ ತಂದೆಯ ಹೆಸರು ಸುಬ್ರಾಯ ಗಣಪತಿ ಭಟ್. ಸುಬ್ರಾಯ ಭಟ್ ರವರ ತಂದೆಗೆ ಮೂರು ಜನ ಮಕ್ಕಳು. ಅವರ ಹೆಸರು ಅನಂತ ಗಣಪತಿ ಭಟ್, ಸುಬ್ರಾಯ ಗಣಪತಿ ಭಟ್ ಮತ್ತು ಸೀತಾ ಭಟ್ ಆಗಿರುತ್ತದೆ. 18 ರಿಂದ 22 ನೇ ಪ್ರತಿವಾದಿಗಳು ಸೀತಾ ಭಟ್ ರವರ ವಾರಸುದಾರರು ಎಂದರೆ ಸರಿ. ಸದ್ರಿ 18 ರಿಂದ 22 ನೇ ಪ್ರತಿವಾದಿಗಳು ಮೂಲ ದಾವಾ ಸಂಖ್ಯೆ 123/2011 ರಂತೆ ದಾವೆ ದಾಖಲಿಸಿದ್ದರು ಎಂದರೆ ಸರಿ.

ಸದ್ರಿ ದಾವೆಯಲ್ಲಿ ನಾನು ಪಕ್ಷಗಾರಳಾಗಿದ್ದೆನು ಎಂದರೆ ಇರಬಹುದು. ಸದ್ರಿ ದಾವೆಯಲ್ಲಿ ಆದ ಅಂತಿಮ ಆದೇಶದ ವಿರುದ್ದ ಸಲ್ಲಿಸಿದ ಮೇಲ್ಮನವಿ ಅಂದರೆ ಆರ್ ಎ ಸಂಖ್ಯೆ 25/2017 ರಲ್ಲಿಯೂ ಸಹ ನಾನು ಪಕ್ಷಗಾರಳಾಗಿದ್ದೆನು ಎಂದರೆ ಹೌದು. ಈ ಮೇಲೆ ಹೇಳಿದ ಮೂಲ ದಾವಾ ಸಂಖ್ಯೆ 123/2011 ರಲ್ಲಿರುವ ದಾವಾ ಆಸ್ತಿಗಳು ಮತ್ತು ಈ ದಾವೆಯಲ್ಲಿರುವ ದಾವಾ ಆಸ್ತಿಗಳು ಒಂದೇ ಆಗಿರುತ್ತದೆ ಎಂದರೆ ಸರಿ. ಆರ್ ಎ ಸಂಖ್ಯೆ 25/2017 ರಲ್ಲಿ ಈ ದಾವೆಯ 18 ರಿಂದ 22 ನೇ ಪ್ರತಿವಾದಿಗಳಿಗೆ ಒಟ್ಟಾಗಿ ದಾವಾ ಆಸ್ತಿಯಲ್ಲಿ 1/3 ಅಂಶ ಹಕ್ಕು ಇದೆ ಎಂದು ಡಿಕ್ರಿ ಆಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಅದೇ ರೀತಿ ಈ ದಾವೆಯ 1 ರಿಂದ 7 ಮತ್ತು 9 ನೇ ಪ್ರತಿವಾದಿಗಳಿಗೆ ಹಾಗೂ ನನಗೆ ಸದ್ರಿ ಮೇಲ್ಮನವಿಯಲ್ಲಿ ಒಟ್ಟಾಗಿ ದಾವಾ ಆಸ್ತಿಯಲ್ಲಿ 1/3 ಅಂಶ ಹಕ್ಕು ಇದೆ ಎಂದು ಡಿಕ್ರಿ ಆಗಿರುತ್ತದೆ ಎಂದರೆ ಸಾಕ್ಷಿಯು ಅದಕ್ಕೆ ನಾವು ಒಪ್ಪಿಕೊಂಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಅದೇ ರೀತಿ ಈ ದಾವೆಯ 10 ರಿಂದ 17 ನೇ ಪ್ರತಿವಾದಿಗಳಿಗೆ ಸದ್ರಿ ಮೇಲ್ಮನವಿಯಲ್ಲಿ ಒಟ್ಟಾಗಿ ದಾವಾ ಆಸ್ತಿಯಲ್ಲಿ 1/3 ಅಂಶ ಹಕ್ಕು ಇದೆ ಎಂದು ಡಿಕ್ರಿ ಆಗಿರುತ್ತದೆ ಎಂದರೆ ಸಾಕ್ಷಿಯು ಅದಕ್ಕೆ ನಾವು ಒಪ್ಪಿಕೊಂಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸದ್ರಿ ಮೇಲ್ಮನವಿಯಲ್ಲಿ ವಾದಿಯ ಹೆಸರು ಬಿಟ್ಟು ಹೋಗಿರುತ್ತದೆ ಎಂದು ಹೇಳಿರುತ್ತಾರೆ. ಆರ್ ಎ ಸಂಖ್ಯೆ 25/2017 ರ ಆದೇಶದ ವಿರುದ್ದ ನಾನು ಮತ್ತು ಈ ದಾವೆಯ 1 ರಿಂದ 7 ಮತ್ತು 9 ರಿಂದ 17 ನೇ ಪ್ರತಿವಾದಿಗಳು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ, ಧಾರವಾಡದಲ್ಲಿ ಆರ್ ಎಸ್ ಎ ನಂಬರ 100498/2017 ರಂತೆ ಮೇಲ್ಮನವಿ ಸಲ್ಲಿಸಿರತ್ತೇವೆ ಎಂದರೆ ಹೌದು. ಸದ್ರಿ ಮೇಲ್ಮನವಿ ವಜಾ ಆಗಿರುತ್ತದೆ ಎಂದರೆ ಇರಬಹುದು. ತದನಂತರ ನಾವು ಮಾನ್ಯ ಸರ್ವೋಚ್ಛ ನ್ಯಾಯಾಲಯಕ್ಕೆ Special Leave Petition No.22678/2018 ರಂತೆ ಮೇಲ್ಮನವಿ ಸಲ್ಲಿಸಿದ್ದೆವು ಎಂದರೆ ಹೌದು. ಸದ್ರಿ ಮೇಲ್ಮನವಿಯೂ ಸಹ ವಜಾ ಆಗಿರುತ್ತದೆ ಎಂದರೆ ಇರಬಹುದು. ಈ ದಾವಾ ಆಸ್ತಿಗೆ ಸಂಬಂಧಿಸಿದಂತೆ ಈಗಾಗಲೇ ದಾವೆ ಹೂಡಿ, ಆರ್ ಎ ಸಂಖ್ಯೆ 25/2017 ರಲ್ಲಿ ನಮಗೆ ಹಕ್ಕು ಬಂದಿರುವುದರಿಂದ ಮತ್ತೊಮ್ಮೆ ಈ ದಾವೆಯಲ್ಲಿ ಅದೇ ಆಸ್ತಿಗೆ ಸಂಬಂಧಿಸಿದಂತೆ ಪಾಲು ಕೇಳಲು ಬರುವುದಿಲ್ಲ ಎಂದರೆ ಸಾಕ್ಷಿಯು ವಾದಿಯ ಹೆಸರು ಬಿಟ್ಟು ಹೋಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ವಾದಿಯು ಸುಬ್ರಾಯ ಭಟ್ ರವರ ಕವಲಿನವರು ಆಗಿರುತ್ತಾರೆ ಎಂದರೆ ಸರಿ. ಸುಬ್ರಾಯ ಭಟ್ ರವರ ಕವಲಿನವರರಿಗೆ ಆರ್ ಎ ಸಂಖ್ಯೆ 25/2017 ರಲ್ಲಿ 1/3 ಅಂಶ ಹಕ್ಕು ದಾವಾ ಆಸ್ತಿಯಲ್ಲಿ ಬಂದಿರುವುದರಿಂದ ಸದ್ರಿ ಅಂಶದ ಮೇಲೆ ಮಾತ್ರ ವಾದಿಗೆ ಹಕ್ಕು ಇರುತ್ತದೆ ಎಂದರೆ ಸಾಕ್ಷಿಯು ನನಗೆ ಆ ಬಗ್ಗೆ ಹೇಳಲು ಬರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

2. ಈ ದಾವೆಯ 18 ರಿಂದ 22 ನೇ ಪ್ರತಿವಾದಿಗಳು ಆರ್ ಎ ಸಂಖ್ಯೆ 25/2017 ರಲ್ಲಿ ಆದ ಡಿಕ್ರಿಯ ಪ್ರಕಾರ ಅಂತಿಮ ಡಿಕ್ರಿಗಾಗಿ ಅರ್ಜಿಯನ್ನು ಪ್ರಧಾನ ಸಿವಿಲ್ ನ್ಯಾಯಾಲಯ, ಭಟ್ಕಳದಲ್ಲಿ ಸಲ್ಲಿಸಿರುತ್ತಾರೆ ಎಂದರೆ ಹೌದು. ಷದ್ರಿ ಅರ್ಜಿಯಲ್ಲಿ ನಾನು ಪಕ್ಷಗಾರಳಾಗಿರುತ್ತೇನೆ ಎಂದರೆ ಹೌದು. ಹಾಗಾಗಿ ಈ ದಾವೆಯಲ್ಲಿ ಮತ್ತೊಮ್ಮೆ ದಾವಾ ಆಸ್ತಿಯಲ್ಲಿ ಅರ್ಧಾಂಶ ಹಕ್ಕು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಈಗಾಗಲೇ ದಾವಾ ಆಸ್ತಿಗೆ ಸಂಬಂಧಿಸಿದಂತೆ ಆರ್ ಎ ಸಂಖ್ಯೆ 25/2017 ರಲ್ಲಿ ಪ್ರಾಥಮಿಕ ಡಿಕ್ರಿ ಆಗಿರುವುದರಿಂದ ಮತ್ತೊಂದು ಬಾರಿ ಈ ದಾವೆಯಲ್ಲಿ ಆ ಬಗ್ಗೆ ಡಿಕ್ರಿ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯ ಜೊತೆ ಶಾಮೀಲಾಗಿ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**